

ಜಪಾನ್‌ನ ಅತಿ ಎತ್ತರದ ಪರ್ವತ ಮೌಂಟ್ ಫ್ಯೂಜಿ



ಕಮಕುರದಲ್ಲಿರುವ ಸುಂದರ ಹಸೆ ದೇರಾ ದೇವಾಲಯ



ಅತಿ ಪುರಾತನ ಮತ್ತು ಪ್ರಸಿದ್ಧ ಸೆಂಸೋಜಿ ದೇವಸ್ಥಾನ

ಶಿಬುಯಾ ಕ್ರಾಸಿಂಗ್ ಎನ್ನಲಾಗುತ್ತದೆ. ಒಂದು ಅಂದಾಜಿನ ಪ್ರಕಾರ ಒಂದೇ ಬಾರಿ ಇಲ್ಲಿ ಎರಡರಿಂದ ಮೂರು ಸಾವಿರ ಜನ ರಸ್ತೆ ದಾಟಬಹುದಾಗಿದೆ. ಸುಮಾರು 20 ಲಕ್ಷ ಜನ ಇಲ್ಲಿ ಪ್ರತಿನಿತ್ಯ ರಸ್ತೆ ದಾಟುತ್ತಾರೆ. ಇದು ಜಗತ್ತಿನಲ್ಲೇ ಅತ್ಯಂತ ಜನನಿಬಿಡ ಪಾದಚಾರಿಗಳ ರಸ್ತೆ ದಾಟುವ ಮಾರ್ಗವೆಂದು ಗುರುತಿಸಲಾಗಿದೆ. ಎಲ್ಲಾ ರಸ್ತೆಯ ವಾಹನಗಳನ್ನು ನಿಲ್ಲಿಸಿ ರಸ್ತೆ ಮಧ್ಯದಲ್ಲಿ ಜನ ಸೆಲ್ಫಿ ತೆಗೆಯುವುದನ್ನು, ರೀಲ್ಸ್ ಮಾಡುವುದನ್ನು ನೋಡುವುದೇ ತುಂಬಾ ಮಜವಾಗಿದೆ.

## ಸುಂದರ ಕಮಕುರ

ಟೋಕಿಯೊ ನಗರದಿಂದ ತುಸು ದೂರದಲ್ಲಿರುವ ಇನ್ನೊಂದು ಅತ್ಯಂತ ಸುಂದರ ಸ್ಥಳ ಕಮಕುರ. ಟೋಕಿಯೊದಿಂದ ಸುಮಾರು 50 ಕಿ.ಮೀ. ದೂರದಲ್ಲಿರುವ ಕಮಕುರದಲ್ಲಿ ಬುದ್ಧನ ವಿಗ್ರಹವಿದೆ. ಸೌಮ್ಯ ಮುಖದ 11 ಮೀಟರ್ ಎತ್ತರದ ಬುದ್ಧನ ವಿಗ್ರಹವು ವಿಶಾಲ ಬಯಲಿನಲ್ಲಿ, ಪ್ರಕೃತಿಯ ಮಡಿಲಿನಲ್ಲಿದೆ. ಸುಂದರ ನಿಸರ್ಗದ ಮಧ್ಯದಲ್ಲಿರುವ ಬುದ್ಧನ ವಿಗ್ರಹದ ಮುಂದೆ ಸ್ವಲ್ಪ ಸಮಯ ಧ್ಯಾನಸ್ಥ ಸ್ಥಿತಿಯಲ್ಲಿ ಕುಳಿತರೆ ಮನಸ್ಸು ಶಾಂತಗೊಳ್ಳುವುದರಲ್ಲಿ ಯಾವುದೇ ಸಂದೇಹವಿಲ್ಲ. ಕಮಕುರದಲ್ಲಿರುವ ಇನ್ನೊಂದು ಸುಂದರ ದೇವಾಲಯ ಹಸೆ ದೇರಾ. ಎತ್ತರದ ಪ್ರದೇಶದಲ್ಲಿರುವ ಈ ದೇವಾಲಯಕ್ಕೆ ನಡೆಯುವ ದಾರಿಯುದ್ದಕ್ಕೂ ಸಣ್ಣ ಸಣ್ಣ ಕಲ್ಲಿನಿಂದ ಮಾಡಿದ ಬೌದ್ಧ ಭಿಕ್ಷುಗಳ ವಿಗ್ರಹಗಳು ಕಣ್ಮನ ಸೆಳೆಯುವಂತಿವೆ.

ಎರಡನೇ ಮಹಾಯುದ್ಧದಲ್ಲಿ ನಲುಗಿದ ಪುಟ್ಟ ದೇಶ ಜಪಾನ್. ಸುನಾಮಿ, ಭೂಕಂಪದಂತಹ ಪ್ರಾಕೃತಿಕ ವಿಕೋಪದಿಂದ ತತ್ತರಿಸಿದರೂ ವಿಶ್ವಕ್ಕೆ ಜಪಾನಿಗರ ಕೊಡುಗೆ ಅಪಾರ. ತಂತ್ರಜ್ಞಾನದಲ್ಲಿ ಜಪಾನ್ ಸದಾ ವಿಶ್ವಕ್ಕೆ ಮಾದರಿ. ತಂತ್ರಜ್ಞಾನದಲ್ಲಿ ಎಷ್ಟೇ ಮುಂದುವರಿದರೂ ಪ್ರಕೃತಿಯನ್ನು ನಾಶಪಡಿಸದೆ ಅಭಿವೃದ್ಧಿ ಹೊಂದಿರುವುದು ಜಪಾನಿನ ಹೆಗ್ಗಳಿಕೆಯೇ ಸರಿ. ಶಿಸ್ತು ಪಾಲನೆ, ಸಹನೆ, ಮೌನ, ಸ್ವಚ್ಛತೆ ಹಾಗೂ ಆತಿಥ್ಯದಲ್ಲಿ ಜಪಾನಿಗರು ಅನುಕರಣೀಯರು.

ಪ್ರಾಕೃತಿಕ ಸೊಬಗಿನ, ಐತಿಹಾಸಿಕ ಮತ್ತು ಆಧುನಿಕ ನಗರ ಟೋಕಿಯೊ ದೇಶ ವಿದೇಶದ ಪ್ರವಾಸಿಗರ ಭೇಟಿಗೆ ಅತ್ಯಂತ ಸೂಕ್ತವಾದ ತಾಣ.